# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 20/2016

(ಪ್ರಾಸಾ-3 ಚಾಸಾ-3 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ11.10.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಆರ್. ಪ್ರಕಾಶ, |
| ತಂದೆಯ/ಗಂಡನ ಹೆಸರು | - | ರಾಜು, |
| ವಯಸ್ಸು | - | 39 ವರ್ಷ, |
| ಉದ್ಯೋಗ | - | ಬಂಡೆ ಕೆಲಸ |
| ವಾಸ | - | ಸಂಪಂಗಿರಾಮನಗರ, ಆನೇಕಲ್. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

ಪ್ರಾಸಾ.1 ಮತ್ತು 2 ನನ್ನ ತಾಯಿ ಮತ್ತು ತಂದೆ. ಚಾಸಾ-4 ನನ್ನ ಪತ್ನಿ. ಚಾಸಾ-5 ಮತ್ತು 6 ನಮ್ಮ ಸಂಬಂಧಿಕರು. ನಾವು ಪರಿಶಿಷ್ಟ ಜಾತಿಯ ಬೋವಿ ಜಾತಿಗೆ ಸೇರಿದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತು. ಆರೋಪಿ ತಿಗಳರ ಜಾತಿಗೆ ಸೇರಿದವರು. ದಿಃ19.05.2015 ರಂದು ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ನಾನು, ಪ್ರಾಸಾ.1, 2, ಚಾಸಾ.4 ರಿಂದ 6 ನಮ್ಮ ಮನೆಯಲ್ಲಿ ಇದ್ದೇವು. ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿ, ಆತನ ಹೆಂಡತಿ ಮತ್ತು ಅವರ ಸಂಬಂಧಿಕರಾದ ವೆಂಕಟೇಶ ನಮ್ಮ ಮನೆಗೆ ಬಂದು ನಮೊಂದಿಗೆ ಗಲಾಟೆ ಮಾಡಿದರು. ಆರೋಪಿ ನಾರಾಯಣಸ್ವಾಮಿ ನಮಗೆ ಒಡ್ಡ, ಮಡ್ಡ, ಕೂಕಾ ಅಂತೆಲ್ಲಾ ಬೈದರು. ನಮ್ಮನ್ನೆಲ್ಲಾ ಹೊಡೆದು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದರು. ನನ್ನ ತಂದೆ ಕೇಳಿದಾಗ ಆರೋಪಿ ನಾರಾಯಣಸ್ವಾಮಿ ನನ್ನ ತಂದೆಗೆ ಹೊಡೆದ. ನನಗೆ ಅಪಘಾತವಾಗಿದ್ದರಿಂದ ನಾನು ಮನೆಯಲ್ಲಿ ಮಲಗಿದ್ದೆ. ನಾನು ಶಬ್ದ ಮಾಡಿದೆ. ಅದಕ್ಕೆ

ಆರೋಪಿ ನಾರಾಯಣಸ್ವಾಮಿ ಬಂದು ನನ್ನ ಕಾಲು ಹಿಡಿದು ಎಳೆದ. ನಮ್ಮ ಮನೆಯ ಹಾಸಿಗೆ, ಸಾಮಾನು ಎಲ್ಲಾ ಬಿಸಾಕಿ ಆರ್ಭಟ ಮಾಡಿದ.

2. ನಾವು ಇರುವ ಮನೆ ನಮ್ಮ ತಾಯಿ ಹೆಸರಿನಲ್ಲಿ ಇದೆ. ಆ ಮನೆಯನ್ನು ಖಾಲಿ ಮಾಡುವಂತೆ ಬಂದು ಆ ರೀತಿ ಆರೋಪಿ ಮಾಡಿದ. ಆತ ನಮ್ಮ ಮನೆಯ ಬೀಗವನ್ನು ಸಹ ಹಾಕಿದ. ಕುಡಿಯುವ ನೀರು ಬರಬಾರದೆಂದು ತೊಟ್ಟಿಗೂ ಸಹ ಆತ ಬೀಗ ಹಾಕಿದ್ದ. ನಾನು ಸಹಾಯವಾಣಿ ಸಂಖ್ಯೆ 100 ಇದಕ್ಕೆ ಕರೆ ಮಾಡಿದೆ. ಆಗ ಪೊಲೀಸರು ಬಂದರು. ನನ್ನ ಹೆಂಡತಿ ಅತ್ತು ಕೇಳಿಕೊಂಡರೂ ಸಹ ಆರೋಪಿತರು ತೊಂದರೆ ಮಾಡಿದರು. ಚಾಸಾ.5 ಮತ್ತು 6 ಇವರು ಸಹ ಗಲಾಟೆ ಮಾಡಬೇಡಿ ಎಂದು ಆರೋಪಿಗೆ ವಿನಂತಿಸಿದರು. ನನ್ನ ಹೆಂಡತಿಗೆ ನೀನು ನಿನ್ನ ಮಗನನ್ನು ಕರೆದುಕೊಂಡು ಊರಿಗೆ ಹೋಗು ಈ ನನ್ ಮಕ್ಕಳನ್ನು ಒದ್ದು ಪೊಲೀಸ್ ಠಾಣೆಗೆ ಹಾಕುತ್ತೇನೆ ಎಂದು ಆರೋಪಿ ಹೇಳಿದ. ಆರೋಪಿ ದಿನಾ ಬಂದು ನಮೊಂದಿಗೆ ಗಲಾಟೆ ಮಾಡುತ್ತಿದ್ದ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ.

**ಪಾಟೀ ಸವಾಲುಃ** (ತಮ್ಮ ಹಿರಿಯ ನ್ಯಾಯವಾದಿಗಳು ಉಚ್ಚ ನ್ಯಾಯಾಲಯದಲ್ಲಿ ಇರುವುದಾಗಿ ರೆಕಾರ್ಡ್ ನಲ್ಲಿ ಇರುವ ವಕೀಲರ ಸಹ ನ್ಯಾಯಾವಾದಿಗಳು ತಿಳಿಸಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ ಮತ್ತು ಸಾಕ್ಷಿಗೆ ಓದಿ ಹೇಳಲಾಗಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ.ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಗೆ ಮಧ್ಯಾಹ್ನದ ಕಾಲಾವಧಿಯಲ್ಲಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಶ್ರೀ ವಿಜಿವಿ ವಕೀಲರು ಶ್ರೀ ಟಿಪಿ ವಕೀಲರ ಪರವಾಗಿ ಸಮಯ ಕೋರುತ್ತಾರೆ. ಶ್ರೀ ಟಿಪಿ ವಕೀಲರು ಬೇರೊಂದು ನ್ಯಾಯಾಲಯದಲ್ಲಿ ನಿರ್ದೇಶನ ನೀಡಿದ ಪ್ರಕರಣದಲ್ಲಿ ಟ್ರೈಯಲ್ ಅನ್ನು ನಡೆಸುತ್ತಿರುತ್ತಾರೆ. ಆದ್ದರಿಂದ ಪಾಟೀ ಸವಾಲಿಗೆ ಸಮಯ ಕೋರುತ್ತಾರೆ. ರೂ.500/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ ಮತ್ತು ಸಾಕ್ಷಿಗೆ ಓದಿ ಹೇಳಲಾಗಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ.ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು